939 (577) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಲ್ಲಿ ಗುರುತಿಸಲಾದ ನಕ್ಸಲ್ ಪೀಡಿತ ಪ್ರದೇಶಗಳಾವುವು, (ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಗಳ ವಿವರ ನೀಡುವುದು)

ಆ) ನಕ್ಸಲ್ ಪೀಡಿತ ಪ್ರದೇಶಾಭಿವೃದ್ಧಿಗಾಗಿ ಸರ್ಕಾರ ರೂಪಿಸಿ ಜಾರಿಗೊಳಿಸಿರುವ ಯೋಜನೆಗಳಾವುವು ಹಾಗೂ ಅವುಗಳಿಗಾಗಿ ಇಲ್ಲಿಯ ತನಕ ಬಿಡುಗಡೆಗೊಳಿಸಿದ ಅನುದಾನ ಎಷ್ಟು, (ವಿವರ ನೀಡುವುದು)

ಇ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಗೆ ಈ ಬಗ್ಗೆ ಬಿಡುಗಡೆಗೊಳಿಸಿದ ಅನುದಾನ ಎಷ್ಟು,

ಈ) ಈ ವಿಶೇಷ ಅನುದಾನದ ಅನುಷ್ಠಾನದಲ್ಲಿ ಕ್ಷೇತ್ರ ಶಾಸಕರಿಗೆ ಸರ್ಕಾರ ನಿಗದಿಪಡಿಸಿರುವ ಅಧಿಕಾರ ವ್ಯಾಪ್ತಿ ಏನು,

ಉ) ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಕಾನೂನಿನ್ವಯ ಅವಕಾಶವಿಲ್ಲದಿರುವ್ಯದರಿಂದ ಪರ್ಯಾಯ ಪರಿಹಾರ ವ್ಯವಸ್ಥೆಗೆ ಸರ್ಕಾರದ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ನಂಸದೀಯ ವ್ಯವಹಾರಗಳ ಸಚಿವರು)

ಅ) 1) ರಾಜ್ಯದಲ್ಲಿ ಗುರುತಿಸಲಾದ ನಕ್ಸಲ್ ಪೀಡಿತ ಜಿಲ್ಲೆಗಳು ಇಂತಿವೆ

ಕೋಲಾರ, ತುಮಕೂರು, ಮಂಗಳೂರು, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬೀದರ್

2) ರಾಜ್ಯದಲ್ಲಿ ನಕ್ಸಲ್ ಪೀಡಿತ ಪ್ರದೇಶಗಳೆಂದು ಗುರುತಿಸಿರುವ ತಾಲ್ಲೂಕುಗಳು

ಔರಾದ್, ಬೀದರ್, ಬಳ್ಳಾರಿ, ಸಿರಗುಪ್ಪಾ, ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು, ಶೃಂಗೇರಿ, ಕೊಪ್ಪ, ಮೂಡಿಗೆರೆ, ಬೆಳ್ತಂಗಡಿ, ಬಾಗೇಪಲ್ಲಿ, ಗಂಗಾವತಿ, ಕೊಪ್ಪಳ, ರಾಯಚೂರು, ಸಿಂಧನೂರು, ಲಿಂಗಸಗೂರು, ತೀರ್ಥಹಳ್ಳಿ, ಹೊಸನಗರ, ಸಾಗರ, ಭದ್ರಾವತಿ, ಮಧುಗಿರಿ ಕಸಬಾ, ವೈ ಎನ್

ಹೊಸಕೋಟೆ, ಪಾವಗಡ, ಕುಂದಾಪುರ, ಕಾರ್ಕಳ, ಚಿಂಚೋಳಿ, ಮುಧೋಳ್, ಸೇಡಂ, ಯಾದಗಿರಿ, ಸಂಡೂರು, ಚಿಂತಾಮಣಿ, ಹೊಸಪೇಟೆ, ದೇವದುರ್ಗ, ಉಡುಪಿ, ಬಾಳೆಹೊನ್ನೂರು ಮತ್ತು ಚಿಕ್ಕಮಗಳೂರು

3) ರಾಜ್ಯದಲ್ಲಿ 456 ಗ್ರಾಮಗಳನ್ನು ನಕ್ಸಲ್ ಪೀಡಿತ ಗ್ರಾಮಗಳೆಂದು ಗುರುತಿಸಲಾಗಿದೆ

ಆ)

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | 2005–06ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ (ಲಕ್ಷ ರೂ ಗಳಲ್ಲಿ) | 2006–07ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ (ಲಕ್ಷ ರೂ ಗಳಲ್ಲಿ) |
|---|---|---|---|
| 1 | ತುಮಕೂರು | 300 00 | 290 00 |
| 2 | ಚಿಕ್ಕಮಗಳೂರು | 300 00 | 180 00 |
| 3 | ದಕ್ಷಿಣ ಕನ್ನಡ | 100 00 | 90 00 |
| 4 | ಉಡುಪಿ | 100 00 | 130 00 |
| 5 | ಬೀದರ್ | – | 50 00 |
| 6 | ಗುಲ್ಬರ್ಗಾ | – | 10 00 |
| 7 | ರಾಯಚೂರು | – | 200 00 |
| 8 | ಬಳ್ಳಾರಿ | – | 230 00 |
| 9 | ಚಿತ್ರದುರ್ಗ | – | 170 00 |
| 10 | ಕೋಲಾರ | – | 30 00 |
| 11 | ಶಿವಮೊಗ್ಗ | – | 140 00 |
| | ಒಟ್ಟು | **800 00** | **1520 00** |

ಇ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಗೆ 2005–06ನೇ ಸಾಲಿನಲ್ಲಿ ರೂ 100 00 ಲಕ್ಷ ಹಾಗೂ 2006–07ನೇ ಸಾಲಿನಲ್ಲಿ ರೂ 90 00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ

ಈ) ಇಲ್ಲ

ಉ) ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಗಡಿಯೊಳಗೆ ಸುಮಾರು 40 ಸಣ್ಣಮಟ್ಟ ಜನವಸತಿ ಗ್ರಾಮ (Hamlets) ಇರುತ್ತವೆ ಇವು

ಉದ್ಯಾನವನದ ಅಂಗವಾಗಿರುವುದಿಲ್ಲ ಇವುಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಯಾವುದೇ ಅಭ್ಯಂತರವಿರುವುದಿಲ್ಲ ಆದರೆ ಅರಣ್ಯ ಸಂರಕ್ಷಣಾ ಕಾಯ್ದೆ 1980 ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರನ್ವಯ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಯಾವುದೆ ಅರಣ್ಯೇತರ ಚಟುವಟಿಕೆ ಕೈಗೊಳ್ಳಲು ನಿಗದಿತ ಪ್ರಾಧಿಕಾರದಿಂದ ಮೂರ್ವಾನುಮತಿ ಅಗತ್ಯವಿರುತ್ತದೆ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ನಮೂನೆ 1ರಲ್ಲಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ ಪ್ರಾಧಿಕಾರದಿಂದ ಅನುಮತಿ ಪಡೆದು ಮುಂದಿನ ಕ್ರಮ ಜರುಗಿಸಬಹುದಾಗಿದೆ ಮುಖ್ಯ ವನ್ಯಜೀವಿ ಪರಿಪಾಲಕರು, ಬೆಂಗಳೂರು ಇವರ ಪತ್ರ ಸಂಖ್ಯೆ ಡಿಡಬ್ಲ್ಯೂಎಲ್/ ಐಡಿಪಿ/ ಸಿಆರ್–43/ 2005–06 ದಿನಾಂಕ 5–1–2006ರಲ್ಲಿ ಸದರಿಯವರ ಅಧಿಕಾರ ವ್ಯಾಪ್ತಿಗೆ ಒಳಪಡಬಹುದಾದ ವನ್ಯಜೀವಿ ಕಾಯ್ದೆ ಉಲ್ಲಂಘನೆಯಾಗದ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ನೀಡಿರುತ್ತಾರೆ

1 3 ಮೀ ಅಗಲದವರೆಗೆ ಈಗ ಇರುವ ಸರ್ವಋತು ಡಾಂಬರ್ ಹಾಕಿಲ್ಲದ ಮಾರ್ಗದ ಅಭಿವೃದ್ಧಿ ಮತ್ತು ನಿರ್ವಹಣೆ

2 ಮೋರಿ ಮತ್ತು ಸಣ್ಣ ಸಂಕಗಳ ನಿರ್ಮಾಣ

3 ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನ ಗಳಲ್ಲಿರುವಂತೆ ಅರಣ್ಯ ಬೆಳೆಯುವ ಸ್ಥಳದ ಅಭಿವೃದ್ಧಿ (Habitat Improvement) ಚಟುವಟಿಕೆಗಳಾದ ನೀರಿನ ಸೆಲೆಗಾಗಿ ಸಣ್ಣ ಅಣೆಕಟ್ಟುಗಳನ್ನು ಕಟ್ಟುವುದು, ನೀರಿನ ಸೆಲೆಯ ಇರುವ ಪ್ರದೇಶಗಳಲ್ಲಿ ಅಗೆದು ಅವುಗಳ ನಿರ್ವಹಣೆ, ಮಳೆ ನೀರು ಹಿಡಿದಿಡಲು ಮಣ್ಣಿನ ಕೆರೆಗಳ ಅಭಿವೃದ್ಧಿ

940 (159) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಸುಮಾರು 3000ಕ್ಕೆ ಮೇಲ್ಪಟ್ಟು ವಿತರಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಇದರಿಂದ ಹಿರಿಯ ನಾಗರಿಕರಿಗೆ ಯಾವ ಯಾವ ಸೌಲಭ್ಯಗಳು ಲಭಿಸುತ್ತವೆ,